ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಕಂಡಿಕೆ (217) ರ ಅನ್ವಯ ಗುತ್ತಿಗೆದಾರರು 12.02.2014 ರಂದು ತೆಗೆದುಕೊಂಡಿರುವ ಕಾಮಗಾರಿ ಆದೇಶದನ್ವಯ ಬ್ಯಾಟರಾಯನಪುರ ವಿಭಾಗದಲ್ಲಿ ತೆಗೆದುಕೊಂಡಿರುವ ಕಾಮಗಾರಿಯ ಟೆಂಡರ್ ಷೆಡ್ಯೂಲ್ ಪರಿಶೀಲಿಸಿ ಅವರು ನೀಡಿರುವ ವಾರ್ಡ್ ಸಂಖ್ಯೆ 11 ರಲ್ಲಿ ಅಳವಡಿಸಿರುವ ಪಿಟ್ಟಿಂಗ್ ವಿವರಗಳನ್ನು ಸ್ಥಳ ಪರಿವೀಕ್ಷಣೆ ನೆಡೆಸಿದಾಗ ಕಾಮಗಾರಿಯನ್ನು ನಿರ್ವಹಿಸಿರುವುದು ಕಂಡು ಬಂದಿರುತ್ತದೆ. ವಿವರಗಳೊಂದಿಗೆ ಹಾಗೂ ಛಾಯಾ ಚಿತ್ರಗಳೊಂದಿಗೆ ಬಿಲ್ಲನ್ನು ತಯಾರಿಸಿ ಸಲ್ಲಿಸದೆ.

VR

ಕಿ.ಅ(ವಿ)

ಕಾ.ಪಾ.ಅ(ವಿ)

ಸದರಿ ಕಡತವನ್ನು ಪರಿಶೀಲಿಸಲಾಗಿ "Provding Street light MV SV and Switch board in Ward 11 Kuvempunagara Vidyaranyapura Sub Division" ಎಂಬ ಕಾಮಗಾರಿಯ ಕಾಮಗಾರಿ ಸಂಕೇತ 011-14-000025 ಕಾಮಗಾರಿಯನ್ನು ಬ್ಯಾಟರಾಯನಪುರ ವಿಭಾಗದಿಂದ ಕರೆದ ಟೆಂಡರ್ ಮುಖೇನ ಕಾಮಗಾರಿ ಕಾರ್ಯಾದೇಶ ಸಂಖ್ಯೆ: EE/BTP/BBMP/E-TND/295/2013-14, Dated:12.02.2014 ಅನ್ವಯ ಕಾಮಗಾರಿಯನ್ನು ತೆಗೆದುಕೊಂಡಿರುವುದು ಕಂಡುಬಂದಿರುತ್ತದೆ.

ಗುತ್ತಿಗೆದಾರರಾದ ಶ್ರೀ.ಹೆಚ್.ಗಂಗಾಧರ್‌ರವರು ದಿನಾಂಕ:09.05.2022 ರಂದು ಈ ಕಛೇರಿಗೆ ಪತ್ರವನ್ನು ನೀಡಿ "ಎಚ್.ಗಂಗಾಧರ್ ಆದ ನಾನು ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ವಾರ್ಡ್ ಸಂಖ್ಯೆ 11 ರಲ್ಲಿ ವಿದ್ಯುತ್ ಕಾಮಗಾರಿಯ ಆದೇಶವನ್ನು ದಿನಾಂಕ:12.02.2014 ರಲ್ಲಿ ತೆಗೆದುಕೊಂಡು ಕಾಮಗಾರಿಯನ್ನು ಭಾಗಶಃ 90% ನ್ನು ಈ ಹಿಂದೆ ಮುಗಿಸಿರುತ್ತೆನೆ. ಕಾಮಗಾರಿಯನ್ನು ನಿರ್ವಹಿಸುವ ಹಂತದಲ್ಲಿ ನನ್ನ ಆರೋಗ್ಯ ಹದಗೆಟ್ಟ ಕಾರಣ ನಾನು ನನ್ನ ವಿದ್ಯುತ್ ಕಾಮಗಾರಿಯನ್ನು ಪೂರ್ಣಗೊಳಿಸಲು ಸಾಧ್ಯವಾಗಿರುವುದಿಲ್ಲ. ತದನಂತರ ಕೋವಿಡ್-19 ಮಹಾಮಾರಿಯು ವಿಪರೀತವಾಗಿ ಜಗತ್ತನ್ನು ಭಾದಿಸಿದ್ದರಿಂದ ಹಾಗೂ ಪುನಃ ನನ್ನ ಬೆನ್ನ ಹಿಂಭಾಗದಲ್ಲಿ ಟ್ಯೂಮರ್ ಕಾಣಿಸಿಕೊಂಡಿದ್ದರಿಂದ ಕಾಮಗಾರಿಯನ್ನು ನಿರ್ವಹಿಸಲು ಸಾಧ್ಯವಾಗಿರುವುದಿಲ್ಲ. ಆದರೆ ಈಗ ಆರೋಗ್ಯದಲ್ಲಿ ಸುಧಾರಣೆ ಆಗಿದ್ದರಿಂದ ಕಾಮಗಾರಿಯನ್ನು ಪೂರ್ಣಗೊಳಿಸಿರುತ್ತೇನೆ. ಕಾಮಗಾರಿಗೆ ಸಂಬಂಧಿಸಿದಂತೆ, ನಿರ್ವಹಿಸಿರುವ ಕಾಮಗಾರಿಯ ಈಗಿನ ಜಿ.ಪಿ.ಎಸ್ ಛಾಯಾಚಿತ್ರಗಳನ್ನು ಬಿಲ್ಲಿನೊಂದಿಗೆ ಲಗತ್ತಿಸಿ ಹಾಗೂ ನನ್ನ ಅನಾರೋಗ್ಯದ ವೈದ್ಯಕೀಯ ಪ್ರಮಾಣ ಪತ್ರವನ್ನು ಲಗತ್ತಿಸಿ ಸಲ್ಲಿಸುತ್ತೇನೆ. ಆದ್ದರಿಂದ ಆರ್ಥಿಕವಾಗಿ ತೊಂದರೆಯನ್ನು ಅನುಭವಿಸುತ್ತಿರುವ ನನಗೆ ಕಾಮಗಾರಿಯ ವಿಳಂಬವನ್ನು ಮನ್ನಿಸಿ, ಬಿಲ್ಲು ಪಾವತಿಸಿ ಕೊಡಲು ಕೋರಿರುತ್ತಾರೆ".

ಆದ್ದರಿಂದ ಗುತ್ತಿಗೆದಾರರ ಮನವಿಯನ್ನು ಪರಿಗಣಿಸಿ ಹಾಗೂ ಅವರ ವೈದ್ಯಕೀಯ ಪ್ರಮಾಣ ಪತ್ರವನ್ನು ಪರಿಶೀಲಿಸಲಾಗಿ ಅವರು ಅನಾರೋಗ್ಯದಿಂದ ತೊಂದರೆಯನ್ನು ಅನುಭವಿಸಿರುವುದು ಕಂಡು ಬಂದಿರುತ್ತದೆ. ಆದ್ದರಿಂದ ಸದರಿ ಗುತ್ತಿಗೆದಾರರು ಈ ಹಿಂದೆ ಭಾಗಶಃ ನಿರ್ವಹಿಸಿರುವ ಮತ್ತು ಉಳಿದ ಕಾಮಗಾರಿಯನ್ನು ಸ್ಥಳ ಪರಿಶೀಲನೆಯಿಂದ ತಿಳಿದು ಬಂದಿರುವುದರಿಂದ ಗುತ್ತಿಗೆದಾರರು ಕಾಮಗಾರಿ ತೆಗೆದುಕೊಂಡ ದಿನಾಂಕದಿಂದ ಎರಡು ತಿಂಗಳ ಕಾಮಗಾರಿಯ ಕಾಲಾವಧಿಯನ್ನು ಹೊರತುಪಡಿಸಿ, ಗುತ್ತಿಗೆದಾರರು

ಕಂಡಿಕೆ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

2990 ದಿನಗಳಷ್ಟು ವಿಳಂಬವನ್ನು ಕಾಮಗಾರಿ ನಿರ್ವಹಿಸಲು ಮತ್ತು ಪೂರ್ಣಗೊಳಿಸಲು ತೆಗೆದುಕೊಂಡಿರುತ್ತಾರೆ. ಆದರೆ ಅವರ ಮನವಿಯ ಮೇರೆಗೆ ಹಾಗೂ ಮಾನವೀಯ ದೃಷ್ಟಿಯಿಂದ ದಿನಕ್ಕೆ ರೂ.10/- ಗಳ ದಂಡದಂತೆ 2990*10=29900 ಗಳ ದಂಡದೊಂದಿಗೆ ಕಾಮಗಾರಿ ವಿಸ್ತರಣಾ ಅವಧಿ(EOT) ಯನ್ನು ಅನುಮೋದಿಸಲು ಕೋರಿದೆ.

ಕಾರ್ಯಪಾಲಕ ಅಭಿಯಂತರರು
ಕ್ಷಾ.ಪಾ.ಪ್ರ(ವಿ)
(ವಿದ್ಯುತ್) ಯಲಹಂಕ 18/6/21
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಅಭಿಯಂತರರು (ಪೂ-ವ)

ಮುಖ್ಯ ಅಭಿಯಂತರರು
ಯಲಹಂಕ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಕೆಲಸದ ಹೆಸರು:– Providing Street lights (MV/SV) and Switch board in Ward No 11 (Kuvempunagara Vidyaranyapura Sub Division).

****

ಮೇಲ್ಕಂಡ ಕಾಮಗಾರಿಯನ್ನು ಯಲಹಂಕ ವಲಯ, ಯಲಹಂಕ ವಿಭಾಗದ ವತಿಯಿಂದ ಕಾರ್ಯಾದೇಶ ಸಂಖ್ಯೆ: **BBMP/EE/YNK.D/E-TND/295/13-14, Dated:12.02.2014**, ರಂತೆ ಗುತ್ತಿಗೆದಾರರಾದ Sri H Gangadhar ಬೆಂಗಳೂರುರವರಿಗೆ ವಹಿಸಿಕೊಟ್ಟು ನಿರ್ವಹಿಸಲು ಕಾರ್ಯಾದೇಶ ನೀಡಲಾಗಿದೆ. ಅದರಂತೆ ಗುತ್ತಿಗೆದಾರರು ಸದರಿ ಕಾಮಗಾರಿಯನ್ನು ನಿರ್ವಹಿಸಿದ್ದು, ಸಂಬಂಧಿಸಿದಂತೆ ಕಾಮಗಾರಿಯ ಬಿಲ್ಲನ್ನು ರೂ.**19,17,048**/- ಗಳಿಗೆ ತಯಾರಿಸಿದ್ದು ಅಳತೆಗಳನ್ನು ಅಳತೆ ಪುಸ್ತಕ ಸಂಖ್ಯೆ: **2571/19-20** ಪುಟ ಸಂಖ್ಯೆ **257073 TO 257075** ರಲ್ಲಿ ನಮೂದಿಸಿ ಬಿಲ್ ಪಾವತಿಗಾಗಿ ಕಡತವನ್ನು ಸಲ್ಲಿಸಿದೆ.

ಮೇಲ್ಕಂಡ ಕಾಮಗಾರಿಯನ್ನು ತೃಪ್ತಿಕರವಾಗಿ ನಿರ್ವಹಿಸಲಾಗಿದ್ದು ಈ ಕಾಮಗಾರಿಯ ಬಿಲ್ ಮೊತ್ತ ರೂ. **19,17,048**/- ಗಳನ್ನು ಪಾವತಿ ಮಾಡಲು ಕಡತವನ್ನು ಸಲ್ಲಿಸಲು ತಮ್ಮ ಆದೇಶಕ್ಕಾಗಿ ಮಂಡಿಸಿದೆ.

ಕಿ.ಅ (ವಿ)

ಸ.ಕಾ.ಪಾ.ಅ (ವಿ)

ಕಾ.ಪಾ.ಅ(ವಿ)